ಆಧಾರದ ಮೇಲೆ ವಹಿಸಲು ಸರ್ಕಾರವು ನಿರ್ಧರಿಸಿತ್ತು. ಈ ದಿಸೆಯಲ್ಲಿ ಒಂದು ಟೆಂಡರ್ ಸಮಿತಿಯನ್ನು ಸರ್ಕಾರದವರು ದಿನಾಂಕ : 21–6–1990ರಲ್ಲಿ ರಚಿಸಿದರು. ಈ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಸಮಿತಿಯ ವರದಿ ಪರಿಶೀಲಿಸಿದ್ದಲ್ಲಿ ಖಾಸಗಿ ಸಂಸ್ಥೆಗಳಿಗೆ ಗುತ್ತಿಗೆ ಆಧಾರದ ಮೇಲೆ ವಹಿಸಿದ್ದಲ್ಲಿ ಕೆಲವು ತೊಂದರೆ ತೊಡಕುಗಳು ಬರುವುದನ್ನು ಗಮನಿಸಲಾಗಿದೆ. ಖಾಸಗಿ ಸಂಸ್ಥೆಗಳಿಗೆ ರಿಯಾಯಿತಿ ನೀಡಬೇಕಾಗುತ್ತದಲ್ಲದೆ ಸದರಿ ಘಟಕಗಳ ಬೆಲೆ ಬಾಳುವ ಯಂತ್ರಗಳು ಗುತ್ತಿಗೆ ಅವಧಿಯಲ್ಲಿ ಖಾಸಗಿಯವರು ಚೆನ್ನಾಗಿ ನಡೆಸಿಕೊಂಡು ಹೋಗುತ್ತಾರೋ ಇಲ್ಲವೋ ಎಂಬ ಶಂಕೆ ಇದೆ. ಇದಲ್ಲದೆ ಈ ಗುತ್ತಿಗೆ ನೀಡುವ ನಿರ್ಧಾರವು ಸಹಕಾರ ಅಂಧೋಲನದ ನೀತಿಗೆ ತದ್‌ವಿರುದ್ಧವಾಗುತ್ತದೆ. ಆದ್ದರಿಂದ ಸರ್ಕಾರವು ಈ ರೋಗಗ್ರಸ್ತ ಘಟಕಗಳನ್ನು ಪುನರಾರಂಭಿಸಲು ಪರ್ಯಾಯ ವ್ಯವಸ್ಥೆಯನ್ನು ಮಾಡುವ ಸಾಧ್ಯಾಸಾಧ್ಯತೆಯನ್ನು ಪರಿಶೀಲಿಸುತ್ತಿದೆ. ಮೊನ್ನೆ ಮೀಟಿಂಗ್ ಕರೆದು ಆಲೋಚನೆ ನಡೆಸಿದೆ. ತೀವ್ರವೇ ಈ ಹಿನ್ನೆಲೆಯಲ್ಲಿ ಒಂದು ನಿರ್ಣಯಕ್ಕೆ ಬರಲಿದೆ.

(5) ಹಾಸನ ನಗರದಲ್ಲಿ ಕುಡಿಯುವ ನೀರಿನ ಸೌಕರ್ಯ ಒದಗಿಸುವುದು.

ಶ್ರೀ ಕೆ.ಹೆಚ್. ಹನುಮೇಗೌಡ :– ಮಾನ್ಯ ಅಧ್ಯಕ್ಷರೇ, ಹಾಸನ ಸಿಟಿಯ (1) ಬೇರನಹಳ್ಳಿ ಬಡಾವಣೆ (2) ಬಸೆಟ್ಟಿಕೊಪ್ಪಲು (3) ಚೆಕ್ಕನಾಳ ಮತ್ತು (4) ವಿದ್ಯಾನಗರಗಳಲ್ಲಿ ಕುಡಿಯುವ ನೀರಿನ ತೊಂದರೆ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ತಂದಿದ್ದರ ಫಲವಾಗಿ ಹಾಸನ ಸಿಟಿಯ ಈ ಬಡಾವಣೆಗಳ ನೀರಿನ ಬವಣೆಯನ್ನು ನಿವಾರಿಸಲು ಸರ್ಕಾರದ ಐದು ಲಕ್ಷ ರೂಪಾಯಿಗಳನ್ನು ಹಾಸನದ ಜಿಲ್ಲಾಧಿಕಾರಿಗಳಿಗೆ ಕಳುಹಿಸಿಕೊಟ್ಟಿದ್ದು ಈ ಹಣವನ್ನು ಹಾಸನ ಜಿಲ್ಲಾಧಿಕಾರಿಗಳು ಹಾಸನ ಮುನಿಸಿಪಾಲಿಟಿಗೆ ಬಿಡುಗಡೆ ಮಾಡಿರುತ್ತಾರೆ. ಹಾಸನ ಮುನಿಸಿಪಾಲಿಟಿಯವರು ಈ ಬಗ್ಗೆ ಇದುವರೆವಿಗೂ ಯಾವ ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ. ಜನರ ಕುಡಿಯುವ ನೀರಿನ ತೊಂದರೆಯು ಬಗೆಹರಿದಿರುವುದಿಲ್ಲ. ಈ ಕಾರಣ ಸರ್ಕಾರ ಹಾಸನ ಮುನಿಸಿಪಾಲಿಟಿಯವರಿಗೆ ಆದೇಶ ನೀಡಿ ಮೇಲೆ ನಮೂದಿಸಿರುವ ಪ್ರದೇಶಗಳ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಮಿನಿವಾಟರ್ ಸಪ್ಲೈ ಸ್ಕೀಂಗಳನ್ನು ತಕ್ಷಣ ಮಾಡುವಂತೆ ಆದೇಶ ನೀಡಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರಿಗೆ ಬಿನ್ನವಿಸಿಕೊಳ್ಳುತ್ತೇನೆ.

ಶ್ರೀ ಬಿ. ಶಿವಮೂರ್ತಿ (ನಗರಾಭಿವೃದ್ಧಿ ಸಚಿವರ ಪರವಾಗಿ) :– ಮಾನ್ಯ ಅಧ್ಯಕ್ಷರೇ, ಹಾಸನ ನಗರದ ಬೀರನಹಳ್ಳಿ ಬಡಾವಣೆ ಬಸೆಟ್ಟಿಕೊಪ್ಪಲು, ಚೆಕ್ಕನಾಳ ಈ ಮೂರು ಬಡಾವಣೆಗಳು ಮಾತ್ರ ನಗರಸಭೆಯ ವ್ಯಾಪ್ತಿಯಲ್ಲಿ ಸೇರಿದ್ದು ಈ ಬಡಾವಣೆಗಳ ಪೈಕಿ ಬೀರನಹಳ್ಳಿ ಬಡಾವಣೆಯಲ್ಲಿ ಈಗಾಗಲೇ 4 ಸಾವಿರ ಗ್ಯಾಲನ್ ಪ್ರತಿ ಗಂಟೆಗೆ ನೀರು ಬರುವಂತಹ (1) ಬೋರ್‌ವೆಲ್‌ಗಳನ್ನು ಕೊರೆಸಲಾಗಿದ್ದು ಅದಕ್ಕೆ ವಿದ್ಯುತ್ ಪಂಪನ್ನು ಅಳವಡಿಸಲು ಪಂಪನ್ನು 29,000–00 ರೂ.ಗಳ ಖರ್ಚಿನಲ್ಲಿ ಖರೀದಿಸಲಾಗಿದೆ ಶೀಘ್ರದಲ್ಲಿಯೇ ಪಂಪನ್ನು ಅಳವಡಿಸಿ ಅಲ್ಲಿಯ ಜನರ ನೀರಿನ ಸಮಸ್ಯೆಯನ್ನು ಬಗೆಹರಿಸಲಾಗುವುದು. ಬಸೆಟ್ಟಿಕೊಪ್ಪಲು ಮತ್ತು ಚೆಕ್ಕನಾಳು ಬಡಾವಣೆಗಳಲ್ಲಿ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯಿಸುವ ವ್ಯವಸ್ಥೆ ಮಾಡಲಾಗಿದ್ದು ಅವುಗಳಿಂದ ವಿದ್ಯುತ್ ಪಂಪಗಳನ್ನು ಅಳವಡಿಸಿ ಈ ಬಡಾವಣೆಗಳ ಜನರ ನೀರಿನ ಬವಣೆಯನ್ನು ಪರಿಹರಿಸಲಾಗುವುದು.

ವಿದ್ಯಾನಗರ ಬಡಾವಣೆಯು ನಮ್ಮ ನಗರಸಭೆಯ ವ್ಯಾಪ್ತಿಯೊಳಗೆ ಬರುವುದಿಲ್ಲ ಈ ಬಡಾವಣೆಗಳಲ್ಲದೆ ನಗರದ ಇತರ ಕ್ಷೇತ್ರಗಳಲ್ಲಿ ಇರುವ 8 ಬೋರ್‌ವೆಲ್‌ಗಳಿಗೆ ಪಂಪ್‌ಗಳನ್ನು ಕೊಡಿಸಲು 2,47,000–00 ರೂ.ಗಳನ್ನು ಖರ್ಚು ಮಾಡಲಾಗಿದೆ. ಇನ್ನೂಳಿದ 2,24,000–00 ರೂ.ಗಳನ್ನು ನಗರಸಭೆಯ ವ್ಯಾಪ್ತಿಯಲ್ಲಿ ಬರುವ ಕ್ಷೇತ್ರದ ಪೈಕಿ ನೀರು ತೊಂದರೆಯನ್ನು ಅನುಭವಿಸುತ್ತಿರುವ ಕ್ಷೇತ್ರಗಳಲ್ಲಿ ನೀರನ್ನು ಒದಗಿಸುವ ಬಗ್ಗೆ ಖರ್ಚು ಮಾಡಲಾಗುವುದು.

(6) ಕುಬ್ಜಾ ನದಿಯ ಕೆಂಡಿ ಆಣೆಕಟ್ಟು ದುರಸ್ತಿಯ ಬಗ್ಗೆ.

ಶ್ರೀ ಜಿ.ಎಸ್. ಆಚಾರ್ (ಬೈಂದೂರ್) :– ಮಾನ್ಯ ಅಧಕ್ಷರೇ, ಕುಬ್ಜಾ ನದಿಯ ಕೆಂಡಿ ಆಣೆಕಟ್ಟು ದುರಸ್ತಿ ಕುರಿತು ಹೇಳುವುದಾದರೆ, ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ನದಿ, ತೊರೆಗಳಿಗೆ ಅಡ್ಡಲಾಗಿ ಕಟ್ಟಿದ ಕೆಂಡಿ ಅಣೆಕಟ್ಟುಗಳು, SHRI SUBHASH S. JOSHI: In Chikodi Taluk, one of the Villages, Bedka,